

# ರಂಗಿನೋಕುಳಿಯ ಮಲಬಾರ್ ಟ್ರೋಜನ್



ಎದೆಯ ಮೇಲೆ ಪ್ರಧಾನವಾಗಿ ಕೆಂಪು ಬಣ್ಣ ಕಂಡರೂ ಈ ಹಕ್ಕಿಯು ಹಲವು ಬಣ್ಣಗಳನ್ನು ಹೊಂದಿದೆ. ದಟ್ಟ ಅರಣ್ಯದಲ್ಲಿ ವಾಸವಾಗುವ ಈ ಹಕ್ಕಿ ಮನುಷ್ಯರ ಕಣ್ಣಿಗೆ ಬೀಳುವುದು ಕಡಿಮೆಯೇ.

■ ಚಿತ್ರ-ಲೇಖನ: **ಪುಟ್ಟರಾಜು ಕೈಗಾ**

ಪಶ್ಚಿಮ ಘಟ್ಟಗಳ 'ದಟ್ಟ ಅರಣ್ಯದ ಪಕ್ಷಿ' ಎಂದೇ ಹೆಸರಾಗಿರುವ ಈ ಹಕ್ಕಿ ನಿಜಕ್ಕೂ ವರ್ಣರಂಜಿತ. ವರ್ಣಮಯ ಹಕ್ಕಿಗಳಿಗೆ ರ್‍ಯಾಂಕ್ ನೀಡಿದರೆ ಇದೇ 'ನಂಬರ್ ಒನ್!'

ಕಳೆದ ವರ್ಷ 'ಕೈಗಾ ಬರ್ಡ್ ಮ್ಯಾರಾಥಾನ್'ನ 8 ತಂಡಗಳ ಪೈಕಿ ನಾನು ಮುನ್ನೆಡೆಸಿದ್ದು ಕುಚೇಗಾರ್ ತಂಡ. ಅವತ್ತು ಬೆಳಿಗ್ಗೆ 5.45ಕ್ಕೆ ಹೊರಟು 10 ಗಂಟೆಯವರೆಗೂ ಕಾಳಿ ನದಿದಂಡೆಯಲ್ಲಿ ಪಕ್ಷಿಗಳನ್ನು ಗುರುತಿಸಿ ದಾಖಲಿಸುತ್ತಾ ಸೀದಾ ಕಾಡಿಗೆ ಪ್ರವೇಶ ಮಾಡಿದೆವು. 10 ನಿಮಿಷಗಳ ನಡಿಗೆಯಲ್ಲಿ ಕೊಡಾರದ ಹಳ್ಳ ಸಿಕ್ಕಿತು. ಅದರ ಬಲಭಾಗದಲ್ಲಿ ನಮ್ಮ 18 ಜನರ ಪಕ್ಷಿ ವೀಕ್ಷಕರ ದೊಡ್ಡ ತಂಡಕ್ಕೆ ಒಮ್ಮೆಲೇ ಹೌಹಾರಿದಂತಹ ಅನುಭವ!

ಎದುರಿಗೆ ಇದ್ದ ಕರಿಮತ್ತಿ ಮರದ ಕೊಂಬೆಯಿಂದ ಪ್ರಜ್ವಲಿಸುವ ಬೆಂಕಿಯ ಉಂಡೆಯೇ ಹಾರಿದಂತೆ ಕಂಡುಬಂದ ದೃಶ್ಯವದು! ಇಂಥ ಗಾಢ ಬಣ್ಣದ ಇಷ್ಟು ದೊಡ್ಡಹಕ್ಕಿಯನ್ನು ಕಂಡು, ಖಾಯಂ ಆಗಿ ಕಾಡಿನಲ್ಲಿ ಅಡ್ಡಾಡುವ ನನಗೇ ಅಚ್ಚರಿಯಾಗಿತ್ತು. ಕನ್ನಡನಾಡಿನ ಪಶ್ಚಿಮ ಘಟ್ಟಗಳಲ್ಲಿ ಕಾಣಸಿಗುವ ಅಪರೂಪದ 'ಮಲಬಾರ್ ಟ್ರೋಜನ್' ಹಕ್ಕಿಯಿದು. ಆಕಾಶದಿಂದ ನೇರ ಇಳಿದು ಬಂದ ಗಂಧರ್ವ ಲೋಕದ ಹಕ್ಕಿಯಂತೆ ತೋರಿತು.

ಟ್ರೋಜನ್ ಹಕ್ಕಿಗಳು ಸ್ವಭಾವತಃ ಸದ್ದು ಮಾಡದ ಹಕ್ಕಿಗಳು. ಹಕ್ಕಿಗಳ ಈ ಸದ್ದಿಲ್ಲದ ವರ್ತನೆಯಿಂದಾಗಿ ಇದು ಯಾರ ಗಮನಕ್ಕೂ ಬರುವುದಿಲ್ಲ. ಹುಳುಗಳನ್ನು ಹಿಡಿಯಲು ಕುಳಿತ ಜಾಗದಿಂದ ಹಾರಿ, ಮತ್ತೆ ತಿರುಗಿ ಬಂದು ಕುಳಿತ ಜಾಗದಲ್ಲೇ ಕುಳಿತುಕೊಳ್ಳುತ್ತದೆ. ಇದರಿಂದಾಗಿಯೇ